ಮೂಲ ದಾವಾ ಸಂಖ್ಯೆ. 143/2013 ಪಿ ಡಬ್ಲ್ಯೂ 1

(ದಿನಾಂಕ 17-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದಃ-

ಪ್ರತಿವಾದಿಯರು ಅವರ ಆಸ್ತಿಯ ಪಶ್ಚಿಮದ ಕಡೆಗೆ ಕಾಂಪೌಂಡ್ ಮತ್ತು ಗೇಟನ್ನು ಫಿಕ್ಸ ಮಾಡಿದ್ದಾರೆಂದರೆ ಸರಿ. ಸದರಿ ಕಾಂಪೌಂಡಿನ ಪಶ್ಚಿಮ ದಿಕ್ಕಿಗೆ ಪಿಡ್ಲ್ಯೂಡಿ ರಸ್ತೆ ಮತ್ತು ಗ್ರಾಮ ಠಾಣಾ ಆಸ್ತಿ ಇದೆ ಎಂದರೆ ಸರಿ. ಪ್ರತಿವಾದಿಯರು ಸೂಕ್ತವಾದ ಪರವಾನಿಗೆ ಪಡೆದು ಪಶ್ಚಿಮ ದಿಕ್ಕಿನ ಕಡೆಗೆ ಕಾಂಪೌಂಡ್ ಗೋಡೆ ಮತ್ತು ಅದಕ್ಕೆ ಗೇಟನ್ನು ಕೂಡಿಸಿರುವುದರಿಂದ ಮತ್ತು ಪಶ್ಚಿಮದ ಕಡೆಗೆ ಪಿ ಡಬ್ಲ್ಯೂ ಡಿ ರಸ್ತೆ ಹಾಗೂ ಗ್ರಾಮಠಾಣಾ ಬರುವುದರಿಂದ ಅಲ್ಲಿ ಅತಿಕ್ರಮಣ ಎನ್ನುವ ಪ್ರಶ್ನೆ ಬರುವುದಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಯರು ನೀವು ಹೇಳಿದ ಹಾಗೆ ಆ ರೀತಿ ಅತಿಕ್ರಮಣ ಮಾಡಿರುವ ಬಗ್ಗೆ ಗ್ರಾಮ ಪಂಚಾಯ್ತಿಯವರು ಮತ್ತು ಪಿ ಡಬ್ಲ್ಯೂ ಡಿ ಯವರು ಪ್ರತಿವಾದಿಯರ ವಿರುದ್ಧ ಯಾವುದಾದರೂ ಕ್ರಮವನ್ನು ತೆಗೆದುಕೊಂಡಿದ್ದಾರಾ ಎಂದರೆ ಇಲ್ಲ. ಪ್ರತಿವಾದಿಯರು ಅತಿಕ್ರಮಣ ರೂಪದಲ್ಲಿ ಕಾಂಪೌಂಡ್ ವಾಲ್ ನಿರ್ಮಿಸುತ್ತಿದ್ದಾರಂತಾ ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯರು ಕಾನೂನುಬದ್ಧವಾಗಿ ತಮ್ಮ ಆಸ್ತಿಗೆ ಕಾಂಪೌಂಡ್ ವಾಲನ್ನು ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ.

ಮೋರಿಗೇರಿ ಗ್ರಾಮ ಪಂಚಾಯಿತಿಯಲ್ಲಿ ನನಗಿಂತ ಪೂರ್ವದಲ್ಲಿ ನಮ್ಮ ತಂದೆಯವರು ಗ್ರಾಮ ಪಂಚಾಯ್ತಿ ಸದಸ್ಯರಾಗಿ ಮತ್ತು ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆಂದರೆ ಸರಿ. ನಂತರದಲ್ಲಿ ನಾನು 2 ಅವಧಿಗೆ ಸದರಿ ಗ್ರಾಮ ಪಂಚಾಯ್ತಿಯ ಸದಸ್ಯನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆಂದರೆ ಸರಿ. ನನ್ನ 2 ನೇ ಅವಧಿಯು ಸನ್ 2004-05 ರಲ್ಲಿ ಮುಕ್ತಾಯವಾಗಿರುತ್ತದೆಂದರೆ ಸರಿ. ನಮ್ಮ ಅವಧಿಯಲ್ಲಿ ಗ್ರಾಮ ಪಂಚಾಯ್ತಿ ಸಾಮಾನ್ಯ ಸಭೆ ಮತ್ತು ವಿಶೇಷ ಸಭೆ ಮುಗಿದ ನಂತರ ಹಾಜರಿದ್ದ ಎಲ್ಲಾ ಸದಸ್ಯರ ಸಹಿಯನ್ನು ಸಂಬಂಧಪಟ್ಟ ರಿಜಿಸ್ಟರಿಗೆ ತೆಗೆದುಕೊಳ್ಳುತ್ತಿದ್ದರು ಎಂದರೆ ಸರಿ. ನಿಪಿ-2 ಅರ್ಜಿಯಲ್ಲಿ ತಮ್ಮ ವಿಶ್ವಾಸಿ ಎನ್ನುವ ಸ್ಥಳದಲ್ಲಿ ಇರುವಂತಹ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿಗೆ ದಿಃ29-11-2004 ರ ಮೋರಿಗೇರಿ ಪಂಚಾಯ್ತಿಯ ವಿಶೇಷ ಸಭೆ ನಂ.2/2004-05 ರ ಹಾಜರಾತಿ ಸದಸ್ಯರ ಸಹಿಯ ದೃಢೀಕೃತ ನಕಲು ತೋರಿಸಲಾಗಿ ಅದರಲ್ಲಿ ಕ್ರಮ ಸಂಖ್ಯೆ 12 ರಲ್ಲಿರುವ ಸಹಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಸದರಿ ಸಹಿ ತನ್ನದೇ ಎಂದು ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು ನಿಡಿ-5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಪಂಚಾಯ್ತಿಯವರು ನೀಡಿರುವಂತಹ ದಿಃ29-11-2004 ರ

ಒಂದು ದೃಢೀಕರಣ ಪತ್ರವನ್ನು ತೋರಿಸಿ ಅದರಲ್ಲಿರುವ ವಿವರವನ್ನು ಓದಿ ಹೇಳಲಾಗಿ ಸಾಕ್ಷಿಯು ಸದರಿ ದಾಖಲೆಯಲ್ಲಿ ವಿವರಣೆ ಬರೆದಿದ್ದು ಇದೆ ಅಂತಾ ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿಯರು ನಿಡಿ-5 ರಂತೆ ನನ್ನ ಉಪಸ್ಥಿತಿಯಲ್ಲಿ ದಿಃ29-11-2004 ರಂತೆ ವಿಶೇಷ ಸಭೆ ನಂ.2/2004-05 ರಂತೆ ಅವರ ಆಸ್ತಿಯನ್ನು ಅವರು ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿಯು ಅವರ ಆಸ್ತಿಯನ್ನು ಅವರು ಮಾಡಿಕೊಂಡಿದ್ದಾರೆನ್ನುತ್ತಾರೆ. ನಮ್ಮ ಅಜ್ಜನವರು ಅವರ ಜೀವಿತಾವಧಿಯಲ್ಲಿ ಖರೀದಿ ಪತ್ರ ನಿಪಿ-1 ರಂತೆ ದಾವಾಸ್ತಿಯನ್ನು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರಾ ಎಂದರೆ ಸಾಕ್ಷಿಯು ಮಾಡಿಕೊಂಡಿರುವುದಿಲ್ಲ. ಅವರಿಗೆ ಆಸ್ತಿ ಇತ್ತು ಎನ್ನುವುದರ ಬಗ್ಗೆ ಗೊತ್ತಿತ್ತಾ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಸನ್ 1949 ರಲ್ಲಿ ನಮ್ಮ ಮನೆತನದಲ್ಲಿ ಆದ ನೊಂದಾಯಿತ ಪಾಲುಪಟ್ಟಿಯ ಮಾಲಕ ದಾವಾಸ್ತಿಯು ನಮ್ಮ ತಂದೆಯವರಿಗೆ ಬಂದಿರುತ್ತದೆ. ದಾವಾಸ್ತಿಯು ನಮ್ಮ ತಂದೆಯವರಿಗೆ ಪಾಲುಪಟ್ಟಿಯ ಎ ಶೆಡ್ಯೂಲ್ ನಂತೆ ಬಂದಿರುತ್ತದೆ. ಸದರಿ ಪಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಆ ಪಾಲುಪಟ್ಟಿಯಲ್ಲಿ ದಾವಾಸ್ತಿಯ 50 )( 75 ಮಳ ವಿಸ್ತೀರ್ಣದ್ದು ಇತ್ತು. ಅದು ಉ-ದ 50 ಮಳ, ಪೂ-ಪ 77 ಮಳ ನಮೂದು ಇತ್ತು. ದಾವಾಸ್ತಿಯು ಗ್ರಾಮ ಠಾಣಾದಲ್ಲಿ ಬರುತ್ತದಂತಾ ಹೇಳಿದ್ದು ಆ ಬಗ್ಗೆ ನಾನು ಗ್ರಾಮ ನಕಾಶೆಯನ್ನು ಹಾಜರುಪಡಿಸಿಲ್ಲ. ಸದರಿ ಗ್ರಾಮ ಠಾಣಾ ಎಷ್ಟು ವಿಸ್ತೀರ್ಣದ್ದು ಎಂಬ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರಬಹುದು ಎಷ್ಟು ಎಕರೆ ಅಂತಾ ನನಗೆ ಗೊತ್ತಿಲ್ಲ ಆದರೆ ಅದರ ಸರ್ವೆ ನಂ. 108 ಇರುತ್ತದೆನ್ನುತ್ತಾರೆ.

ಈ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿ ನಂ.2 ವಜಾ ಆಗಿದೆ ಎಂದರೆ ಸರಿ. ಅದರ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿಲ್ಲ. ಸನ್ 2004-05 ರಲ್ಲಿ ನಾನು ಪ್ರತಿವಾದಿಯರ ಆಸ್ತಿಯಲ್ಲಿ ರಿಲಯನ್ಸ ಟವರನ್ನು ಹಾಕಲು ಪ್ರಯತ್ನಪಟ್ಟೆ ಎಂದರೆ ಇಲ್ಲ.

ದಾವಾಸ್ತಿಯ ಕುರಿತು ನಮ್ಮ ಮತ್ತು ಪ್ರತಿವಾದಿಯರ ನಡುವೆ 2007 ರಲ್ಲಿ ಗಲಾಟೆಯಾಯಿತು ಎಂದರೆ ಸರಿ. ಸದರಿ ಗಲಾಟೆಯ ವಿಚಾರವಾಗಿ ಎಸ್ ಎಂ ಮಹಾಂತಯ್ಯ ಬಿನ್ ಕೊಟ್ರಯ ಪಂಚಾಯ್ತಿ ಮಾಡಿರುತ್ತಾರೆಂದರೆ ಸುಳ್ಳು. ಸದರಿ ಅಸ್ತಿಯು ಪ್ರತಿವಾದಿಯರದು ಆಸ್ತಿ ಅಂತಾ ನಮಗೆ ನೇರವಾಗಿ ಪಂಚಾಯ್ತಿಯಲ್ಲಿ ಹೇಳಿದರೆಂದರೆ ಸರಿಯಲ್ಲ. ಸದರಿ ವಿಚಾರದ ಕುರಿತು ನಾನು ಮಹಾಂತಯ್ಯ ಇವರ ಮೇಲೆ ಹಲ್ಲೆ ಮಾಡಿರುತ್ತೇವೆಂದರೆ ಸರಿಯಲ್ಲ. ಸದರಿ ವಿಚಾರದ ಕುರಿತು ಗಜಾಪುರದ ಕೊಟ್ರೇಶ್ ಇವರ ವಿರುದ್ಧ ಸಿ ಸಿ ನಂ.272/2007 ನೇ ಪ್ರಕರಣ ದಾಖಲಾಯಿತು ಎಂದರೆ ಸರಿ ಸಾಕ್ಷಿ ಮುಂದುವರೆದು ಅದರಲ್ಲಿ ನಿರ್ದೋಷಿ ಅಂತಾ ಆದೇಶವಾಯಿತು ಎನ್ನುತ್ತಾರೆ.

ಮೂಲ ದಾವಾ ಸಂಖ್ಯೆ. 143/2013 ಪಿ ಡಬ್ಲ್ಯೂ 1

ನಿಪಿ-2 ರಂತೆ ನಾನು ನಮ್ಮ ದಾಖಲೆಯ ಪ್ರಕಾರ ನಮ್ಮ ಹೆಸರಿಗೆ ದಾವಾಸ್ತಿಯನ್ನು ದಾಖಲು ಮಾಡಿಕೊಡಿ ಅಂತಾ ಕೇಳಿರುತ್ತೇನೆ. ಸದರಿ ಅರ್ಜಿಯನ್ನು ನಾನು ಗುಡಿಸಲು ಕುರಿತು ಸಲ್ಲಿಸಿದ್ದೆ. ನಿಪಿ-2 ರಲ್ಲಿ ಗುಡಿಸಲಿನ ಬಗ್ಗೆ ಬರೆದಿಲ್ಲ. ನಿಪಿ-2 ರಲ್ಲಿ ನಾನು ವಾಸ ಇರುತ್ತೇನಂತಾ ಕಾಲಂ ನ್ನು ತುಂಬಿಲ್ಲ. ನಿಪಿ-2 ರ 4 ನೇ ಕಾಲಂನಲ್ಲಿರುವ ವಿಳಾಸವನ್ನು ನಾನು ತುಂಬಿಲ್ಲ. ಎಷ್ಟು ವರ್ಷದಿಂದ ವಾಸವಾಗಿರುತ್ತೇನಂತಾ ನಾನು ಸದರಿ ಅರ್ಜಿಯಲ್ಲಿ ನಮೂದಿಸಿಲ್ಲ. ನಿಪಿ-3 ರಲ್ಲಿ ಗುಡಿಸಲು ಅಥವಾ ಮನೆ ಯ ಕುರಿತು ಅರ್ಜಿ ಅಂತಾ ನಮೂದಿಸಿರುವುದಿಲ್ಲ. ನಿಪಿ-3 ರ ದಾಖಲೆಯಲ್ಲಿ ವಿಸ್ತೀರ್ಣ ನಮೂದಿಸಿಲ್ಲ. ದಾವಾಸ್ತಿಯ ಪ್ರಕಾರ ನಾವು ಯಾವತ್ತಿಗೂ ಸ್ವಾಧೀನದಲ್ಲಿಲ್ಲ ಆದ್ದರಿಂದ ಆ ರೀತಿ ಯಾವುದೇ ಆಸ್ತಿ ವಾಸ್ತವದಲ್ಲಿಲ್ಲ ಅಂತಾ ಹಿಂಬರಹ ನೀಡಿರುತ್ತಾರೆಂದರೆ ಸರಿ ಸಾಕ್ಷಿ ಮುಂದುವರೆದು ಗುಡಿಸಲು ಇಲ್ಲ ಅಂತಾ ಕೊಟ್ಟಿದ್ದಾರೆನ್ನುತ್ತಾರೆ. .

ಸದರಿ ಹಿಂಬರಹದ ವಿರುದ್ಧ ನಾನು ತಾಲ್ಲೂಕು ಪಂಚಾಯ್ತಿಯ ಇ ಓ ರವರ ಬಳಿ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನಾನು ಗುಡಿಸಲು ಅಂತಾನೇ ಸಲ್ಲಿಸಿದ್ದೆ. ಅದರಲ್ಲಿ ನೀವು ಕ್ರಯಪತ್ರದ ಪ್ರಾಕಾರ ದಾಖಲೆ ಮಾಡಿ ಅಂತಾ ನೀವು ಹೇಳಿಲ್ಲವೆಂದರೆ ಸರಿಯಲ್ಲ. ತಾಲ್ಲೂಕು ಪಂಚಾಯ್ತಿಯವರೂ ಸಹಾ ನೋಟೀಸನ್ನು ಕೊಟ್ಟು ಸ್ಥಳ ಪರಿಶೀಲನೆಗೆ ಬಂದಿದ್ದರು ಎಂದರೆ ಸರಿ. ಅವರೂ ಸಹಾ ನಾವು ತೋರಿಸಿರುವ ಚಕ್ಕುಬಂದಿಯ ಮಧ್ಯದ ಆಸ್ತಿಯಲ್ಲಿ ವಾಸ್ತವಿಕವಾಗಿ ಅಲ್ಲಿ ಇಲ್ಲದೇ ಇದ್ದುದರಿಂದ ಮತ್ತು ಅದನ್ನು ಗುರುತಿಸಲು ಆಗದೇ ಇರುವುದರಿಂದ ನಮ್ಮ ಮೇಲ್ಮನವಿಯನ್ನು ವಜಾ ಮಾಡಿ ಹಿಂಬರ ನೀಡಿರುತ್ತಾರೆಂದರೆ ಸಾಕ್ಷಿಯು ಅಲ್ಲಿ ಗುಡಿಸಲು ಇರಲಿಲ್ಲ ಅದನ್ನು ಕಿತ್ತು ಹಾಕಿದ್ದರಿಂದ ಅವಾಗ ನಮಗೆ ಆ ರೀತಿ ನಮಗೆ ಹಿಂಬರಹವನ್ನು ನೀಡಿರುತ್ತಾರೆನ್ನುತ್ತಾರೆ. ಇ ಓ ರವರು ಸ್ಥಳ ಪರಿಶೀಲನೆಗೆ ಬಂದಾಗ ಪ್ರತಿವಾದಿಯರು ಗುಡಿಸಲು ಕಿತ್ತುಹಾಕಿದ್ದರು ಎಂದು ವಾದಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ಆ ರೀತಿ ನನಗೆ ವಾದಪತ್ರದಲ್ಲಿ ಹೇಳಿ ಬರೆಸಲು ತೊಂದರೆ ಇರಲಿಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ